# ಎರ್ನೆಸ್ಟೊ ಕಾಂಟ್ರೆರಿಯಾಸ್



ಮೆಕ್ಸಿಕನ್ ಸಿನಿಮಾ ನಿರ್ಮಾತೃವಾದ ಎರ್ನೆಸ್ಟೊ ಕಾಂಟ್ರೆರಿಯಾಸ್ ಸ್ಪ್ಯಾನಿಷ್ ಭಾಷೆಯಲ್ಲಿ ಈವರೆಗೆ ನಾಲ್ಕು ಸಿನಿಮಾಗಳನ್ನು ನಿರ್ದೇಶಿಸಿದ್ದಾನೆ. 2017ರಲ್ಲಿ ತೆರೆಕಂಡ 'ಐ ಡ್ರೀಮ್ ಇನ್ ಅನದರ್ ಲಾಂಗ್ವೇಜ್' ಆತನ ನಾಲ್ಕನೇ ಸಿನಿಮಾ. ಕಿರುಚಿತ್ರಗಳನ್ನು ರೂಪಿಸುವುದರಲ್ಲೂ ಪ್ರಸಿದ್ಧನಾದ ಎರ್ನೆಸ್ಟೊ ತನ್ನ ಕಿರುಚಿತ್ರಗಳಿಗೆ ಅಂತರರಾಷ್ಟ್ರೀಯ ಪುರಸ್ಕಾರಗಳನ್ನು ಗಳಿಸಿದ್ದಾನೆ.

ತಾರುಣ್ಯಕಾಲದ ಗೆಳೆಯನ ಮನೆಯ ಎದುರಿಗೆ ಹೋಗಿ ಕೂರುತ್ತಾನೆ. ಆದರೆ, ಸ್ನೇಹಸಂಗಮವಾದ ಪ್ರಸಂಗ ಮತ್ತೆ ಜಗಳವಾಗಿಯೇ ಮುಗಿಯುತ್ತದೆ.

ಮರಳಿ ಯತ್ನವ ಮಾಡುವ ಮಾರ್ಟಿನ್‌ನ ಸಹನೆಗೆ ಸೋತು ಮುದುಕರಿಬ್ಬರು ಮಾತಿಗೆ ಕೂರುತ್ತಾರೆ. ಝಿಕ್ರಿಲ್‌ನಲ್ಲಿ ಇಬ್ಬರ ನಡುವೆ ಮಾತಾಗುತ್ತದೆ. ಏನು ಮಾತನಾಡಿಕೊಂಡರು ಎಂದು ವಿವರಿಸುವುದು ಹೇಗೆ? ಮಾತಿನ ನಡುವೆ ಇಬ್ಬರ ಮುಖದಲ್ಲೂ ಅಪೂರ್ವ ನಗು ಬೆಳಗುತ್ತದೆ. ಆ ನಗು ಸಿನಿಮಾದ ಉಜ್ವಲ ಕ್ಷಣಗಳಲ್ಲೊಂದು. ಆದರೆ, ಅದು ಕ್ಷಣಿಕವಾದ ಸಲ್ಲಾಪವಷ್ಟೇ. ವಿರಸ ಮತ್ತೆ ಮರುಕಳಿಸುತ್ತದೆ. ಇಬ್ಬರೂ ಮುಖ ತಿರುಗಿಸಿಕೊಳ್ಳುತ್ತಾರೆ.

ಇಬ್ಬರೂ ಮುಖ ತಿರುಗಿಸಿಕೊಂಡರಷ್ಟೇ. ಅದು ಒಂದರ್ಥದಲ್ಲಿ ಬದುಕಿಗೆ ಬೆನ್ನು ತಿರುಗಿಸಿದ ಪ್ರಕ್ರಿಯೆಯೂ ಹೌದು. ಇಸಾವುರೊ ಸಾಯುತ್ತಾನೆ. ಎವೆರಿಸ್ಟೊ ಬದುಕಿದ್ದೂ ಸತ್ತಂತಾಗುತ್ತಾನೆ. ಮಾರ್ಟಿನ್‌ನ ಝಿಕ್ರಿಲ್ ಎನ್ನುವ ಸುಂದರಸ್ವಪ್ನ ಸ್ವಪ್ನವಾಗಿಯೇ ಉಳಿಯುತ್ತದೆ; ತೇಜಸ್ವಿಯವರ ಕರ್ವಾಲೊ ಕಥೆಯ ಹಾರುವ ಓತಿಯಂತೆ.

ಇದಿಷ್ಟು 'ಐ ಡ್ರೀಮ್ ಇನ್ ಅನದರ್ ಲಾಂಗ್ವೇಜ್' ಚಿತ್ರದ ಕಥೆ. ಈ ಕಥೆ ನಮಗೆ ಏನನ್ನು ಹೇಳುತ್ತದೆ ಎಂದು ಪ್ರಶ್ನಿಸಿಕೊಂಡರೆ, 'ಏನನ್ನು ಹೇಳುವುದಿಲ್ಲ' ಎನ್ನುವ ಉತ್ತರ ದೊರೆಯುತ್ತದೆ. ಝಿಕ್ರಿಲ್ ಎನ್ನುವ ಭಾಷೆಯ ನೆಪದಲ್ಲಿ ಮನುಷ್ಯನ ಸಣ್ಣತನ ಹಾಗೂ ಅದನ್ನು ಮೀರುವ ದಾರಿಗಳ ಶೋಧ ಚಿತ್ರದಲ್ಲಿದೆ. ಮನುಷ್ಯ ಮನುಷ್ಯರ ನಡುವಣ ಸಂಬಂಧ, ಮನುಷ್ಯ ಹಾಗೂ ಪ್ರಕೃತಿಯೊಂದಿಗಿನ ಸಂಬಂಧಗಳನ್ನು ಭಾಷೆಯ ನೆಲೆಗಟ್ಟಿನಲ್ಲಿ ಸಿನಿಮಾ ಚಿತ್ರಿಸುತ್ತದೆ. ಭಾಷೆಯೊಂದರ ಅಳಿವಿನ ಜೊತೆಗೆ ಒಂದು ಸಮುದಾಯದ ಸ್ಮೃತಿ–ತಿಳಿವಳಿಕೆಗಳು ನಾಶವಾಗುವುದನ್ನು ಸಿನಿಮಾ ಕಾಣಿಸುತ್ತದೆ.

ಇಂಗ್ಲಿಷ್‌ನ ಯಜಮಾನಿಕೆಯ ಹಿನ್ನೆಲೆಯಲ್ಲಿ ಸ್ಥಳೀಯ ಭಾಷೆಗಳ ಅಸ್ತಿತ್ವದ ಪ್ರಶ್ನೆ ಜಾಗತೀಕರಣ ಸಂದರ್ಭದ ಜಗತ್ತು ಎದುರಿಸುತ್ತಿರುವ ಆತಂಕಗಳಲ್ಲೊಂದು. ವಿಶ್ವದ ಆರೇಳು ಸಾವಿರ ಭಾಷೆಗಳಲ್ಲಿ 2100ರ ವೇಳೆಗೆ ಸುಮಾರು ಶೇ. 50ರಿಂದ 90ರಷ್ಟು ಭಾಷೆಗಳು ಕಣ್ಮರೆಯಾಗಬಹುದು ಎನ್ನುವ ಅಂದಾಜಿದೆ. 'ದೊಡ್ಡ ಸಮುದಾಯವೊಂದರ ಭಾಷೆ ನಶಿಸುವುದು ಎಂದರೆ ಆ ಸಮುದಾಯವೇ ನಾಶವಾದಂತೆ. ಆ ಸಮುದಾಯದ ಸಂಸ್ಕೃತಿಯೂ ನಾಶವಾದಂತೆ' ಎನ್ನುವುದು ಭಾಷಾಶಾಸ್ತ್ರಜ್ಞ ಗಣೇಶ್ ಎನ್. ದೇವಿ ಅವರ ಅಭಿಪ್ರಾಯ. ಈ ಆತಂಕದ ಸಾಕಾರರೂಪದಂತೆ 'ಐ ಡ್ರೀಮ್ ಇನ್ ಅನದರ್ ಲಾಂಗ್ವೇಜ್' ಸಿನಿಮಾ